ಶ್ರೀ ಕೆ. ಎಸ್. ಈಶ್ವರಪ್ಪ.— ಮಾನ್ಯ ಅಧ್ಯಕ್ಷರೇ, ರೈತರ ಸಾಲದ ಪಜಾ ಬಗ್ಗೆ ಬೆಳಿಗ್ಗೆ ಸಾಕಷ್ಟು ಚರ್ಚೆ ಆಗುತ್ತಿತ್ತು. ಕರ್ನಾಟಕ ರಾಜ್ಯದ ರೈತರ ಸಾಲದ ಬಗ್ಗೆ ಚರ್ಚೆಯಾಗುವಾಗ ಮಾನ್ಯ ಸಭಾಧ್ಯಕ್ಷರು ಕೂಡ ಇದ್ದರು. ಈ ಚರ್ಚೆ ಸಂದರ್ಭದಲ್ಲಿ...

ಒಬ್ಬರು ಮಾನ್ಯ ಸದಸ್ಯರು.— ಆ ಚರ್ಚೆ ಮುಗಿದಿದೆ.

ಉಪಾಧ್ಯಕ್ಷರು.— ನಾನು ಈಗ ಗಮನ ಸೆಳೆಯುವ ಸೂಚನೆಗೆ ಮೂರು ಜನರನ್ನು ಕರೆದಿದ್ದೇನೆ. ಶ್ರೀ ಎಲ್. ಆರ್. ಶಿವರಾಮೇಗೌಡರವರೇ, ನೀವು ಶುರು ಮಾಡಿ.

ಶ್ರೀ ಕೆ. ಎಸ್. ಈಶ್ವರಪ್ಪ.— ನಾನು ಇದನ್ನು ಪ್ರತಿಭಟನೆ ಮಾಡಿ ಧರಣಿಯನ್ನು ಮುಂದುವರೆಸುತ್ತೇನೆ.

(ಮಾನ್ಯ ಸದಸ್ಯರು ಧರಣಿ ಕುಳಿತಿದ್ದ ಬಿ.ಜೆ.ಪಿ. ಸದಸ್ಯರೊಡನೆ ಸೇರಿಕೊಂಡರು)

ಗಮನ ಸೆಳೆಯುವ ಸೂಚನೆಗಳು

(i) ರಾಜ್ಯದಲ್ಲಿ ಕೊಬ್ಬರಿ ಧಾರಣೆ ಅತ್ಯಂತ ಕನಿಷ್ಟ ಮಟ್ಟಕ್ಕೆ ತಲುಪಿರುವುದರಿಂದ ತೆಂಗು ಬೆಳೆಗಾರರಿಗೆ ತೊಂದರೆ

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಕೊಬ್ಬರಿ ಧಾರಣೆ ಕನಿಷ್ಟ ಮಟ್ಟಕ್ಕೆ ತಲುಪಿರುವುದರಿಂದ ತೆಂಗು ಬೆಳೆಗಾರರಿಗೆ ತೊಂದರೆ ಉಂಟಾಗಿರುವ ಬಗ್ಗೆ ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಕೃಷಿ ಮಂತ್ರಿ ಮತ್ತು ತೋಟಗಾರಿಕೆ ಸಚಿವರು).— ಮಾನ್ಯ ಉಪಾಧ್ಯಕ್ಷರೇ, ನಾನು ಈ ರೀತಿಯಾಗಿ ಸ್ಟೇಟ್‌ಮೆಂಟ್ ಮಾಡುತ್ತೇನೆ.

ರಾಜ್ಯದಲ್ಲಿ ಕೊಬ್ಬರಿಯ ಬೆಲೆಯು ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ರಾಜ್ಯ ಸರ್ಕಾರವು ೧೯೯೯-೨೦೦೦ ಸಾಲಿನಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಕೊಬ್ಬರಿಗೆ ಬೆಂಬಲ ಬೆಲೆಯನ್ನು ನಿಗಧಿಪಡಿಸಲು ಕೋರಿಕೊಂಡಿದೆ. ೧೯೯೦ನೇ ಸಾಲಿನಲ್ಲಿ ಸಂಭವಿಸಿದ ಏರುಪೇರುಗಳನ್ನು ಗಮನಿಸಿ, ರಾಜ್ಯಸರ್ಕಾರವು ಬೆಂಬಲ ಬೆಲೆಯನ್ನು ಪರಿಷ್ಕರಿಸಲು ಭಾರತ ಸರ್ಕಾರಕ್ಕೆ ವರದಿ ಸಲ್ಲಿಸಿತು. ಆ ನಂತರ ಭಾರತ ಸರ್ಕಾರವು ೧೯೯೦ ಫೆಬ್ರುವರಿಯಲ್ಲಿ ಬೆಂಬಲ ಬೆಲೆಯನ್ನು ಸಿ.ಎ.ಪಿ.ಸಿ. ಸಂಸ್ಥೆಯ ಶಿಫಾರಸ್ಸಿನ ಮೇರೆಗೆ ರೂ. ೧೬೦೦ ಗಳಿಗೆ ಏರಿಸಿತು.

ರಾಜ್ಯದಲ್ಲಿ ಕೊಬ್ಬರಿ ಬೆಲೆಯೂ ಬೆಂಬಲ ಬೆಲೆಗಿಂತಲೂ ಕಡಿಮೆಯಾದಾಗ, ಕೊಬ್ಬರಿಯನ್ನು ಕೊಂಡು ಕೊಳ್ಳಲು ಕೇಂದ್ರ ಸರ್ಕಾರದಿಂದ ಸ್ಥಾಪನೆಯಾದ ''ನಾಫೆಡ್'' ಸಂಸ್ಥೆಯನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿದೆ. ಈ ಸಂಸ್ಥೆಯು ಈಗ ಚಾಲ್ತಿಯಲ್ಲಿರುವ ಬೆಂಬಲ ಬೆಲೆಯಂತೆ, ಎಫ್.ಎ.ಕ್ಯೂ. ಕೊಬ್ಬರಿಗೆ ಕ್ವಿಂಟಾಲ್ ಒಂದಕ್ಕೆ ರೂ. ೧೬೦೦ ಮತ್ತು ಎಫ್.ಎ.ಕ್ಯೂ.ಗಿಂತ ಒಂದು ಹಂತ ಕಡಿಮೆಯಾದ ಕೊಬ್ಬರಿಗೆ ಕ್ವಿಂಟಾಲ್ ಒಂದಕ್ಕೆ ರೂ. ೧೫೫೦ರಂತೆ ಕೊಳ್ಳಬಹುದಾಗಿದೆ. ಈ ಸಂಸ್ಥೆಯು ಮಂಗಳೂರು ಕೆ.ಎಸ್.ಸಿ.ಎಂ.ಎಫ್. ಮತ್ತು ಎಸ್.ಕೆ.ಎ.ಸಿ.ಎಂ.ಎಸ್. ನಿಂದ ಸುಮಾರು ೬೦೩ ಕ್ವಿಂಟಾಲ್ ಕೊಬ್ಬರಿಯನ್ನು ಮಾರ್ಚ್ ಮತ್ತು ಮೇ ೧೯೯೯ರ ಅವಧಿಯಲ್ಲಿ ಕೊಂಡಿರುತ್ತದೆ.

೧೯೯೯ ಅವಧಿಯಲ್ಲಿ ವಾತಾವರಣದ ತೇವಾಂಶ ಮತ್ತು ಉಷ್ಣತೆ ಕನಿಷ್ಟಕ್ಕಿಂತಲೂ ಕಡಿಮೆ ಇದ್ದು, ತೆಂಗು ಬೆಳೆಯ ಮೇಲೆ ವ್ಯಾಪಕ ಪರಿಣಾಮ ಬೀರಿತು. ಈ ಬಗ್ಗೆ ಸಮೀಕ್ಷೆ ನಡೆಸಲು ಕೃಷಿ ವಿಶ್ವವಿದ್ಯಾಲಯ ತಜ್ಞರು, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಮತ್ತು ಇಲಾಖಾ ಅಧಿಕಾರಿಗಳ ತಂಡವು ರೋಗ ತಗುಲಿದ ಪ್ರದೇಶದಲ್ಲಿ ವ್ಯಾಪಕ ಸಮೀಕ್ಷೆ ನಡೆಸಿ ರೈತರಿಗೆ ಸೂಕ್ತ ಸಲಹೆ ನೀಡಿದೆ. ಈ ಬಗ್ಗೆ ಹಸ್ತಪ್ರತಿಗಳನ್ನು ಕೂಡ ಹಂಚಲಾಗಿದೆ, ಮತ್ತು ಆಕಾಶವಾಣಿ ಮೂಲಕ ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ಬಿತ್ತರಿಸಲಾಗಿದೆ. ಈಗ ತೆಂಗಿನ ತೋಟಗಳು ಚೇತರಿಸಿಕೊಂಡು ಮಾಮೂಲಿ ಹಂತಕ್ಕೆ ಬರುತ್ತಿವೆ.

† ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕೃಷಿ ಮಂತ್ರಿಗಳು ಈ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಒಂದು ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಬೇಕಾಗಿರುತ್ತದೆ. ಕಳೆದ ಒಂದು ವರ್ಷದ ಹಿಂದೆ ಕೊಬ್ಬರಿ ಬೆಲೆ ಕ್ವಿಂಟಾಲ್‌ಗೆ